ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೫೦ (೨೨೭೦)

ಸದಸ್ಯರ ಹೆಸರು : ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ)

ಉತ್ತರಿಸುವವರು : ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಪ್ರಶ್ನೆ

ಅ) ಡಾ: ನಂಜುಂಡಪ್ಪನವರ ವರದಿ ಆಧಾರದ ಮೇಲೆ ಅತಿ ಹಿಂದುಳಿದ ತಾಲ್ಲೂಕುಗಳ ಪೈಕಿ ಒಂದಾಗಿರುವ ಬಾದಾಮಿ, ಹುನಗುಂದ ಬಾಗಲಕೋಟೆ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಆ ಭಾಗದ ಜನರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಯಾವ ಅವಧಿಯೊಳಗೆ ಇಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗುವುದು ?

ಉತ್ತರ

ಅ) ಹುನಗುಂದ ತಾಲ್ಲೂಕಿನಲ್ಲಿ ಕೆ.ಎಸ್.ಎಸ್.ಐ.ಡಿ.ಸಿ ವತಿಯಿಂದ ೨೦೦೬-೦೭ ನೇ ಸಾಲಿನಲ್ಲಿ ರೂ.೧೧೦.೦೦ ಲಕ್ಷಗಳ ಯೋಜನಾ ವೆಚ್ಚದಲ್ಲಿ ಕೈಗಾರಿಕಾ ವಸಾಹತು ನಿರ್ಮಾಣಕ್ಕೆ ಅನುಮತಿ ನೀಡಲಾಗಿದ್ದು, ರೂ.೮೨.೫೦ ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಬಾಗಲಕೋಟೆ ತಾಲ್ಲೂಕಿನ ಬಿಳಗಿಯಲ್ಲಿ ಕೆ.ಹೆಚ್.ಡಿ.ಸಿ ವತಿಯಿಂದ ಮಗ್ಗಗಳು ಮತ್ತು ಅದರ ಬಿಡಿ ಭಾಗಗಳನ್ನು ಕೈಮಗ್ಗ ನೇಕಾರರಿಗೆ ವಿತರಿಸಲಾಗಿದೆ.

ಆ) ಕೈಗಾರಿಕಾ ವಸಾಹತು ನಿರ್ಮಾಣದ ನಂತರ ಖಾಸಗಿ ಉದ್ದಿಮೆದಾರರಿಗೆ ಹಂಚಿಕೆಯಾದ ನಂತರ ಕೈಗಾರಿಕೆಗಳು ಸ್ಥಾಪನೆಯಾಗುವುದು.